ಅಂಗಡಿಯಲ್ಲಿ ಕುಳಿತೋ, ಮೆರೀನ್ ಡ್ರೈವ್‌ನ ದಂಡೆಯುದ್ದಕ್ಕೂ ನಡೆಯುತ್ತಲೋ ಸಂದೇಶನ ಹತ್ತಿರ ನಿರರ್ಗಳವಾಗಿ ಹರಟುತ್ತಿರುತ್ತೇನಲ್ಲ. ಎಲ್ಲಿಂದ ವಿಷಯಗಳು ಬರುತ್ತವೋ, ಅದು ಹೇಗೆ ಇಬ್ಬರಿಗೂ ಅಷ್ಟು ಆಸಕ್ತಿಯೋ! ಆಫೀಸಿನ ಸಣ್ಣದೊಂದು ಘಟನೆಯನ್ನೂ, 'ಏ, ಇವತ್ತು ಏನಾಯ್ತು ಗೊತ್ತುಂಟ? ಆ ಶರ್ಮಾ ಇದ್ದಾನಲ್ಲ, ಉದ್ದದವ...' ಎಂದು ಸುರುಮಾಡಿದರೆ, ಅವನು ಕುತೂಹಲದಿಂದ, 'ಹಾಂ, ಹಾಂ ಏನು ಮಾಡಿದ ಅವ?' ಎಂದು ಕೇಳುತ್ತಿದ್ದ. ಆಫೀಸಿನ ಯಾವುದೋ ಕ್ಷುಲ್ಲಕ ಘಟನೆಯನ್ನು ಅವನು ಹಾಸ್ಯಮಯವಾಗಿ ಅಭಿನಯಿಸುತ್ತಿದ್ದರೆ, ಕಚಗುಳಿ ಇಟ್ಟಂತೆ ಮನಸಾರೆ ನಗುತ್ತಿದ್ದೆನಲ್ಲ ಎಂದು ಅಚ್ಚರಿಗೊಂಡಳು. ಆಫೀಸಿನ ರಾಜಕೀಯವಿರಲಿ, ಕೆಲಸದ ಸಮಸ್ಯೆಗಳೇ ಇರಲಿ ಅವಳು ಹಂಚಿಕೊಳ್ಳುತ್ತಿದ್ದುದು ಸಂದೇಶನ ಹತ್ತಿರವೇ.

ಮನೆಗೆ ಬಂದ ಮೇಲೆ ಅಮ್ಮ, 'ಏನು? ಹೇಗನಿಸಿತು?' ಎಂದು ಕೇಳಿದಳು. ಪ್ರಶ್ನೆಯೊಡನೆ ಅವಳ ಕಣ್ಣುಗಳಲ್ಲಿ ಆಸೆ ಇಣುಕುತ್ತಿತ್ತಾದರೂ, ತೀರ ಸಾಮಾನ್ಯವಾಗಿ ಕೇಳಿದಂತೆ ಕೇಳಿದ್ದಳು. ಅವಳ ತೀಕ್ಷ್ಣ ಕುತೂಹಲ, ಅದುಮಿಟ್ಟ ನಿರೀಕ್ಷೆಗಳನ್ನು ಗಮನಿಸದಿರುವುದು ಸಾಧ್ಯವಿರಲಿಲ್ಲ. ಈ ಅಮ್ಮನನ್ನು ಸುಧಾರಿಸುವುದು ಸಾಧ್ಯವೇ ಇಲ್ಲವೇನೋ ಎಂದುಕೊಂಡಳು. ಅಮ್ಮ ಪುನಃ ಕೇಳಿದಳು, 'ಹೇಳು, ಹೇಗನಿಸಿತು?'

'ಅಂದರೆ?'

'ಹುಡುಗ ಹೇಗೆ?'

'ಹುಡುಗ ಅಡ್ಡಿಲ್ಲ. ಒಳ್ಳೆ ಕೆಲಸ, ಬುದ್ಧಿವಂತ, ಶಿಕಾಗೊದಲ್ಲಿ ಮನೆ ಮಾಡಿದ್ದಾನಂತೆ.'

'ಹಾಗಾದರೆ ನಿಂಗೆ ಖುಷಿಯಾಗಿದೆ?'

'ನೀ ಎಂಥ ಕೇಳುದಮ್ಮ? ಖುಷಿಯಾಗುದು ಬೇರೆ, ಮದುವೆಯಾಗುದು ಬೇರೆ. ಆಯ್ತ?'

'ಅದನ್ನೇ ಕೇಳ್ತ ಬಂದಿದ್ದೇನೆ ಇಷ್ಟು ವರ್ಷ? ನಿಂಗೆ ಎಂಥ?...'

'ನಂಗೆ ಅವನ ಹತ್ರ ಮಾತಾಡಲಿಕ್ಕೆ ಯಾವ ಕಾಮನ್ ಟಾಪಿಕ್ಕೂ ಇರಲಿಲ್ಲ.'

'ಮತ್ತೆ ಅಷ್ಟು ಹೊತ್ತು ಮಾತಾಡಿದ್ರಿಯಲ್ಲ?'

'ಅವನ ಕಂಪನಿ ವಿಷಯ, ನನ್ನ ಆಫೀಸಿನ ವಿಷಯ, ಮುಂಬಯಿ, ಶಿಕಾಗೋ, ಹೀಗೆ.'

'ಮತ್ತೆ?'

'ನಂಗೊತ್ತಿಲ್ಲಮ್ಮ, ನಂಗೆ ಹೇಳ್ಲಿಕ್ಕೆ ಗೊತ್ತಾಗುದಿಲ್ಲ.' ಎಂದು ಅಲ್ಲಿಂದ ಒಳಗೆ ಹೋಗಲು ಹೊರಟಳು.

ಅವಳ ಅಮ್ಮನ ಅಸಮಾಧಾನವು ಎಷ್ಟು ಪ್ರಬಲವಾಗಿತ್ತೆಂದರೆ, ಮುಖದ ಮೇಲೆ ಸುಸ್ಪಷ್ಟವಾಗಿ ಬರೆದಿಟ್ಟಂತಿತ್ತು. ತನ್ನ ಮತ್ತು ಆ ಹುಡುಗನ ನಡುವೆ ನಿಜವಾದ ಮಾತುಕತೆಗಳಾಗದಿರುವ ಬಗೆಗಾಗಲೀ, ಅಥವಾ ಒಬ್ಬರನ್ನೊಬ್ಬರು ಅರಿತುಕೊಳ್ಳುವುದು ಅಸಾಧ್ಯವಾದುದರ ಬಗೆಗಾಗಲೀ ಅಮ್ಮನಿಗೆ ಏನೂ ಚಿಂತೆಯಿದ್ದಂತಿಲ್ಲವಲ್ಲ, ಮದುವೆಗೆ ಒಪ್ಪಲಿಲ್ಲ ಎಂಬುದೇ ಮುಖ್ಯವಾಯಿತೇ ಎಂದುಕೊಂಡಳು.

'ದೀಪಕ್ ಸಾಲಿಯಾನ್ ಅಂತ ಯಾರೋ ನಿನ್ನ ಕ್ಲಾಸ್‌ಮೇಟ್ ಅಂತೆ?' ಅಮ್ಮನ ಇನ್ನೊಂದು ಪ್ರಯತ್ನ.

'ಯಾರು ಹೇಳಿದ್ದು ನಿಂಗೆ?'

'ನೀ ಬರುವ ಮುಂಚೆ ಶಮಾ ಬಂದಿದ್ದಳಲ್ಲ, ಅವಳು...'

'ಏನಾಯ್ತಂತೆ ಅವನಿಗೆ?'

'ಅಲ್ಲ, ನೀನು ಜಾತಿ ವಿಚಾರ ಯೋಚನೆ ಮಾಡುದು ಬೇಡ. ನಿಂಗೆ ಇಷ್ಟ ಆದ್ರೆ ನಮಗೆ ಇಷ್ಟವೇ.'